**ಅಸಲು ದಾವಾ ನಂ. *44/2014***

**ಪಿ ಡಬ್ಲ್ಯು *01***

***<u>ದಿನಾಂಕ:23-01-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>***

**(*1* ರಿಂದ *10*ನೇ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರು. ಆದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯ್ತು.)**

**<u>ಪಾಟೀ ಸವಾಲುಃ ಶ್ರೀ ಸಿಎಸ್‌ಎಸ್ ವಕೀಲರಿಂದಃ*11,18* ಮತ್ತು *19*ನೇ ಪ್ರತಿವಾದಿಯರ ಪರವಾಗಿಃ</u>**

ನನ್ನ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಾನು ಗೆಜ್ಜೆಗೊಂಡನಹಳ್ಳಿಯಲ್ಲಿ ವಾಸವಿದ್ದೇನೆ. ಪರಮೇಶ್ವರಪ್ಪ ಅಂದರೆ *1*ನೇ ವಾದಿ ಅಣ್ಣ, ಓಂಕಾರಪ್ಪ ಅಂದರೆ *3*ನೇ ವಾದಿ ನನ್ನ ತಮ್ಮ. *1*ನೇ ವಾದಿ ಈಗ ಬೆಂಗಳೂರಿನಲ್ಲಿ ವಾಸವಿದ್ದಾರೆ. *1*ನೇ ವಾದಿಯವರು ಎ ಪಿ ಎಂ ಸಿ ಯಾರ್ಡ್ ಬಳಿ ಒಂದು ಅಂಗಡಿ ಮತ್ತು ದಾಸರ ಬೀದಿಯಲ್ಲಿ ಅಂಗಡಿ ಮಾಡಿಕೊಂಡಿದ್ದರು ಎಂದರೆ ಸರಿ. ಅವರಿಗೆ ದಾಸರ ಬೀದಿಯಲ್ಲಿ ಒಂದು ಮನೆ ಇದೆ ಎಂದರೆ ಸರಿ. ಅದನ್ನು ಬಾಡಿಗೆ ಕೊಟ್ಟಿದ್ದಾರೆಂದರೆ ಸರಿ. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನನ್ನ ಹೆಸರಿನಲ್ಲಿ ಬೇರೆ ಆಸ್ತಿಗಳು ಇರುವುದಿಲ್ಲ. ನಾವು ವಾಸ ಮಾಡುವ ಮನೆ ನನ್ನ ಪತ್ನಿ ಹೆಸರಿನಲ್ಲಿದೆ. ಅದು ಮೊದಲು ನನ್ನ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ.

*3*ನೇ ವಾದಿ ಭದ್ರಾವತಿಯ ಫ್ಯಾಕ್ಟರಿಯಲ್ಲಿ ಕೆಸ ಮಾಡುತ್ತಿದ್ದರು. ಅವರಿಗೆ ಭದ್ರಾವತಿಯಲ್ಲಿ ಆಸ್ತಿಗಳಿವೆ ಎಂದರೆ ಸರಿಯಲ್ಲ. ನನ್ನ ಅಜ್ಜ ಲಿಂಗಪ್ಪನನ್ನು ನೋಡಿದ್ದೇನೆ. ನನ್ನ ಅಜ್ಜ ತೀರಿಕೊಂಡಾಗ ನನಗೆ *35* ವರ್ಷ ವಯಸ್ಸಾಗಿತ್ತು. ನನ್ನ ತಂದೆ ತೀರಿಕೊಂಡು *20* ವರ್ಷಗಳಾಗಿದೆ. ನನ್ನ ತಂದೆ ಮತ್ತು ಚಿಕ್ಕಪ್ಪ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಎಷ್ಟನೇ ಇಸವಿಯಲ್ಲಿ ವಿಭಾಗ ಮಾಡಿಕೊಂಡು ಎಂದು ಗೊತ್ತಿಲ್ಲ. ಸದರಿ ವಿಭಾಗದ ಆಧಾರದ ಮೇಲೆ ನನ್ನ ತಂದೆ ಹಾಗೂ ಚಿಕ್ಕಪ್ಪನ ಹೆಸರಿಗೆ ಖಾತೆಗಳು ಬಂದಿರುತ್ತದೆ. ನಮ್ಮ ತಂದೆಗೆ ನಾವು ಒಟ್ಟು *5* ಜನ ಮಕ್ಕಳು. ಅದರಲ್ಲಿ ಗಂಗಮ್ಮ ಲಲಿತಮ್ಮ ಹೆಣ್ಣುಮಕ್ಕಳು. ಅವರಲ್ಲಿ ಗಂಗಮ್ಮ ಬದುಕಿದ್ದಾರೆ. ಲಲಿತಮ್ಮ ತೀರಿಕೊಂಡಿರುತ್ತಾರೆ. ಈ ದಾವೆಯಲ್ಲಿ ಗಂಗಮ್ಮನನ್ನು ಪಕ್ಷಗಾರರಾಗಿ ಮಾಡಿಲ್ಲ. ಲಲಿತಮ್ಮ ಗಂಡ-ಮಕ್ಕಳನ್ನು ಪಕ್ಷಗಾರರಾಗಿ ತಂದಿಲ್ಲ. ನನ್ನ ಸಹೋದರರ ನಂಜುಂಡಪ್ಪನ ವಾರಸುದಾರರು ಮತ್ತು

ಮತ್ತೊಬ್ಬ ಸಹೋದರರ ರಾಜಪ್ಪನ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಲಾಗಿದೆ.

ಸರ್ವೆ ನಂಃ*10/1* ರಲ್ಲಿ *2* ಎಕರೆ *10* ಗುಂಟೆ ಇರುತ್ತದೆ ಎಂದರೆ ಸರಿ. ದಾವಾ ಸರ್ವೆ ನಂಃ *10/1* ರಲ್ಲಿ *4* ಎಕರೆ ಇರುವ ಬಗ್ಗೆ ಪಹಣಿಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. *4* ಎಕರೆ *32* ಗುಂಟೆಯಲ್ಲಿ ನಂಜಪ್ಪನ ಕುಟುಂಬಕ್ಕೆ *2* ಎಕರೆ *16* ಗುಂಟೆ ಹೋಗಿರುತ್ತದೆ ಎಂದರೆ ಸರಿ. ಅಸಲು ದಾವಾ ನಂಃ *239/1967* ಪ್ರಕರಣದ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ವಾದಿ ಮೂರು ಜನ ಮತ್ತು *1*ನೇ ಪ್ರತಿವಾದಿ ಹಾಗೂ *2* ರಿಂದ *10* ಪ್ರತಿವಾದಿರವರಿಗೆ ನನ್ನ ಅಜ್ಜ ಬರೆದ ದಾನ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಸದರಿ ದಾನ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಸದರಿ ದಾನ ಪತ್ರ ಆದ ನಂತರ ಅಸಲು ದಾವಾ ನಂಃ *239/1967* ದಾಖಲು ಮಾಡಲಾಗಿರುತ್ತದೆ. ಎಫ್ ಡಿ ಪಿ ಮುಖಾಂತರ *2* ಎಕರೆ *16* ಗುಂಟೆ ನಂಜಪ್ಪನವರಿಗೆ ಕೊಟ್ಟ ಬಗ್ಗೆ ಎಫ್ ಡಿ ಪಿ ನಂಃ *01/1980* ರ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ.

ದಾವಾ ಆಸ್ತಿ ಅಜ್ಜಂಪುರದಿಂದ ಬುಕ್ಕಾಂಬುದಿಗೆ ಹೋಗುವ ರಸ್ತೆಯಲ್ಲಿ ಇರುತ್ತದೆ. ಅದು ಉತ್ತರ - ದಕ್ಷಿಣವಾಗಿ ಉದ್ದವಾಗಿದೆ ಎಂದರೆ ಸರಿ. ಸದರಿ ಸರ್ವೆ ನಂಃ *10/1* ರ ಉತ್ತರಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ. ಅದು ಅಣ್ಣೆಯಿಂದ ಗೆಜ್ಜೆಗೊಂಡನಹಳ್ಳಿಗೆ ಹೋಗುವ ರಸ್ತೆಯಾಗಿರುತ್ತದೆ. ಸದರಿ ರಸ್ತೆಯ ದಕ್ಷಿಣಕ್ಕೆ *2* ಎಕರೆ *16* ಗುಂಟೆ ಜಮೀನಿನಲ್ಲಿ ನಂಜಪ್ಪನ ಮಕ್ಕಳಾದ ನಾಗೇಂದ್ರಪ್ಪ ಮತ್ತು ಪುಟ್ಟಪ್ಪ ಇರುತ್ತಾರೆಂದರೆ ಸರಿ. ನಾಗೇಂದ್ರಪ್ಪ ಮತ್ತು ಪುಟ್ಟಪ್ಪನ ದಕ್ಷಿಣಕ್ಕೆ ನಾಗಪ್ಪನವರು ಖರೀದಿ ಮಾಡಿರುವ *22* ವರೆ ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ *22* ವರೆ ಗುಂಟೆ ಜಮೀನಿನ ದಕ್ಷಿಣಕ್ಕೆ ಗೋವಿಂದಪ್ಪನವರು ಖರೀದಿಸಿದ *22* ವರೆ ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ *22* ವರೆ ಗುಂಟೆ ಜಮೀನಿನ ದಕ್ಷಿಣಕ್ಕೆ ಇರುವ *1* ಎಕರೆ *11* ಗುಂಟೆಯಲ್ಲಿ ಬಸಪ್ಪ ಇದ್ದಾರೆಂದರೆ ಸರಿಯಲ್ಲ. ಸಾಕ್ಷಿ ನಾವಿದ್ದೇವೆ ಎಂದು ಹೇಳುತ್ತಾರೆ.

*1*ನೇ ಪ್ರತಿವಾದಿ ನಂಜುಂಡಪ್ಪನವರು ನಾಗಪ್ಪನಿಗೆ ಮಾರಾಟ ಮಾಡಿರುತ್ತಾರೆ. ನಾಗಪ್ಪ ಖರೀದಿ ಮಾಡಿದಾಗಿನಿಂದ ಅವರೇ ಸ್ವಾದೀನತೆಯಲ್ಲಿದ್ದರು. ಅನಂತರ ಅವರು ತನ್ನ ಸೊಸೆ ಶಕುಂತಲಾರ ಅಂದರೆ *18*ನೇ ಪ್ರತಿವಾದಿಗೆ ದಾನ ಮಾಡಿದ್ದಾರೆಂದರೆ ಗೊತ್ತಿಲ್ಲ. ಆ ರೀತಿ ದಾನ ಪತ್ರದ ಮೂಖಾಂತರ ಪಡೆದುಕೊಂಡ ನಂತರ *12* ವರ್ಷಗಳ ಕಾಲದಿಂದ ಶಕುಂತಲಾ ರವರು ಸ್ವಾದೀನತೆಯಲ್ಲಿದ್ದಾರೆಂದರೆ ಗೊತ್ತಿಲ್ಲ. ನಾನು ಶಕುಂತಲಾರವರನ್ನು ನೋಡಿದ್ದೇನೆ. ಆಕೆಯ ಮಗಳು *19*ನೇ ಪ್ರತಿವಾದಿ

ಜಯಶೀಲಾರವರನ್ನು ಕೂಡಾ ನೋಡಿದ್ದೇನೆ. ನಂತರ ಜಯಶೀಲಾರವರಿಗೆ ಆಕೆಯ ತಾಯಿ ಶಕುಂತಲಾರವರು *11* ಗುಂಟೆ ಜಮೀನನ್ನು ಕ್ರಯ ಮಾಡಿಕೊಟ್ಟಿದ್ದಾರೆಂದರೆ ನನಗೆ ಗೊತ್ತಿಲ್ಲ. ನಾಗಪ್ಪ ಖರೀದಿ ಮಾಡಿದಾಗ ಅವರ ಹೆಸರಿಗೆ ಕಂದಾಯದ ದಾಖಲೆಗಳು ಬದಲಾಗಿದ್ದವು ಎಂದರೆ ಸರಿ. ಅನಂತರ ಕಂದಾಯದ ದಾಖಲೆಗಳು ದಾನ ಪತ್ರದ ಆಧಾರದ ಮೇಲೆ ಶಕುಂತಲಾರವರಿಗೆ ವರ್ಗಾವಣೆಯಾಗಿದೆ ಎಂದರೆ ಸರಿ. ಅನಂತರ ಆಕೆಯ ಮಗಳಿಗೂ ಕೂಡಾ *11* ಗುಂಟೆಗೆ ಸಂಬಂಧಿಸಿದಂತೆ ಕ್ರಯಪತ್ರದ ಆಧಾರದ ಮೇರೆಗೆ ಕಂದಾಯದ ದಾಖಲೆಗಳು ಬದಲಾದವು ಎಂದರೆ ಸರಿ. ಅಂದಿನಿಂದ ನಾಗಪ್ಪ ಆತನ ಸೊಸೆ ಮತ್ತು ಆಕೆಯ ಮಕ್ಕಳೇ ಸ್ವಾದೀನತೆಯಲ್ಲಿದ್ದಾರೆಂದರೆ ಸರಿ.

*11* ನೇ ಪ್ರತಿವಾದಿಯ ತಂದೆ ಹೆಸರು ದೊಡ್ಡಣ್ಣನ ನಾಗಪ್ಪನ ಮಗ ಗೋವಿಂದಪ್ಪ ಎಂದರೆ ಗೊತ್ತು. ಅವರಿಗೂ ಕೂಡಾ ನನ್ನ ಅಣ್ಣ ನಂಜುಂಡಪ್ಪರವರೇ *22* ವರೆ ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆಂದರೆ ಸರಿ. ಗೋವಿಂದಪ್ಪ ಖರೀದಿ ಮಾಡಿದ ನಂತರ ಅವರ ಹೆಸರಿಗೆ ಕಂದಾಯದ ದಾಖಲೆ ಬದಲಾದವು ಎಂದರೆ ಸರಿ. ಅವರೇ *22* ವರೆ ಗುಂಟೆ ಜಮೀನಿನ ಸ್ವಾದೀನತೆಯಲ್ಲಿದ್ದಾರೆಂದರೆ ಸರಿ. ರಾಮಚಂದ್ರಪ್ಪ ಅವರ ತಂದೆ ಗೋವಿಂದಪ್ಪ ತೀರಿಕೊಂಡ ನಂತರ ಈಗ ಸ್ವಾದೀನತೆಯಲ್ಲಿದ್ದಾರೆಂದರೆ ಸರಿ.

ದಾವಾ ಆಸ್ತಿ ತುಂಬಾ ಬೆಲೆ ಬಾಳುವ ಆಸ್ತಿ ಎಂದರೆ ಸರಿ. ನಾನು ದಾವೆಯಲ್ಲಿ ಅವಶ್ಯಕವಾದ ನ್ಯಾಯಾಲಯ ಶುಲ್ಕ ಪಾವತಿಸಿಲ್ಲ ಎಂದರೆ ಸರಿಯಲ್ಲ. ಎನ್ ಎಂ ಪರಮೇಶ್ವರಪ್ಪ ಅಂದರೆ *1* ನೇ ವಾದಿ ನನ್ನ ಅಣ್ಣ ಎಂದರೆ ಸರಿ. ನಾಡಕಚೇರಿಗೆ ಅಜ್ಜಂಪುರಕ್ಕೆ ಒಂದು ಅರ್ಜಿಯನ್ನು ಅವರು ದಿಃ *10-03-2000* ರಂದು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಅನಂತರ ಎಂ ಆರ್ ನಂಃ *29/99-2000* ರಂತೆ ಖಾತೆ ಕೂಡಾ ಬದಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಕ್ರಯಪತ್ರಗಳು ನೋಂದಣಿ ಆಗಿರುತ್ತದೆ ಎಂದರೆ ಸಾಕ್ಷಿದಾರರು ಹೌದು ಎನ್ನುತ್ತಾರೆ. ಸದರಿ ಪತ್ರಗಳು ಆದ ನಂತರ *34* ವರ್ಷಕ್ಕೂ ಹೆಚ್ಚು ವರ್ಷವಾದ ನಂತರ ನಾನು ಈ ದಾವೆ ಮಾಡಿದ್ದೇನೆಂದರೆ ಸರಿ. ಆ ಕಾರಣ ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕನ್ನು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವ ಇತರ ಪರಿಹಾರಗಳನ್ನು ಕೂಡಾ ಪಡೆದುಕೊಳ್ಳಲು ನನಗೆ ಹಕ್ಕಿಲ್ಲ ಎಂದರೆ ಸರಿಯಲ್ಲ. *1* ಎಕರೆ *11* ಗುಂಟೆ ಜಮೀನು ನಮ್ಮ ಸ್ವಾದೀನತೆಯಲ್ಲಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಆಸ್ತಿ ಬಿಟ್ಟು ಉಳಿದ ನಮ್ಮ ಕುಟುಂಬದ ಆಸ್ತಿಗಳನ್ನು ನಾವು ವಿಭಾಗ ಮಾಡಿಕೊಂಡಿದ್ದೇವೆ. ನಾನು ಮತ್ತು ನನ್ನ ಸಹೋದರರು *1963* ರಿಂದ *65* ರ ಒಳಗೆ

ವಿಭಾಗ ಮಾಡಿಕೊಂಡಿದ್ದೇವೆ. ಸದರಿ ವಿಭಾಗ ಪತ್ರದ ಪ್ರಕಾರ ನಮಗೆ ಬಂದ ಆಸ್ತಿಗಳು ನಮ್ಮ ಖಾತೆಯಲ್ಲಿರುತ್ತದೆ. ಇತರ ಆಸ್ತಿಳನ್ನು ವಿಭಾಗ ಮಾಡಿಕೊಳ್ಳುವಾಗ ದಾವಾ ಆಸಿತಗಳನ್ನು ಕೂಡಾ ನಾವು ವಿಭಾಗ ಮಾಡಿಕೊಂಡಿದ್ದೆವು ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ದಾವಾ ಸರ್ವೆ ನಂಬರಿನ ಆಸ್ತಿ ಸಹೋದರರರಾದ ನಂಜುಂಡಪ್ಪ ಮತ್ತು ರಾಜಪ್ಪನವರಿಗೆ ದಾವಾ ಆಸ್ತಿ ವಿಭಾಗದಲ್ಲಿ ಹೋಗಿರುತ್ತದೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ನಂಜುಂಡಪ್ಪ ಮತ್ತು ರಾಜಪ್ಪನವರು ನಾಗಪ್ಪ ಮತ್ತು ಗೋವಿಂದಪ್ಪನವರಿಗೆ ಆಸ್ತಿಗಳನ್ನು ಮಾರಾಟ ಮಾಡುವಾಗ ತನ್ನ ಪಾಲಿಗೆ ವಿಭಾಗದಲ್ಲಿ ಬಂದ ಆಸ್ತಿಗಳನ್ನು ಮಾರಾಟ ಮಾಡಲಾಗಿರುತ್ತದೆ ಎಂದು ಉಲ್ಲೇಖ ಇರುತ್ತದೆ ಎಂದರೆ ಗೊತ್ತಿಲ್ಲ. ನಾವು ವಿಭಾಗ ಮಾಡಿಕೊಂಡಿರುವ ಬಗ್ಗೆ ದಾಖಲೆ ಇರುವುದಿಲ್ಲ. ದಾವಾ ಆಸ್ತಿಯನ್ನು ಬಿಡಲಾಗಿದೆ ಅಥವಾ ಹೊರತುಪಡಿಸಲಾಗಿದೆ ಎಂದು ತೋರಿಸಲು ಕೂಡಾ ದಾಖಲೆ ಕೊಟ್ಟಿಲ್ಲ. ದಾವೆಯಲ್ಲಿ ನಾವು *1963* ರಿಂದ *65* ಸಾಲಿನ ನಡುವೆ ವಿಭಾಗ ಮಾಡಿಕೊಂಡ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನನಗೆ ಮತ್ತು ನನ್ನ ಸಹೋದರರಿಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ನಾಗಪ್ಪ ಮತ್ತು ಗೋವಿಂದಪ್ಪನವರು ಆಸ್ತಿಯನ್ನು ಖರೀದಿ ಮಾಡಿದ ವಿಚಾರ ನನಗೆ ಆಗಲೇ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಖರೀದಿ ಮಾಡಿದ ಪ್ರತಿವಾದಿಗಳಿಗೆ ತೊಂದರೆ ಕೊಡುವ ದುರುದ್ದೇಶದಿಂದ ಸುಳ್ಳು ಪ್ರಕರಣ ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಡಿ ಸಿ ಪಿ ವಕೀಲರಿಂದ *20*ನೇ ಪ್ರತಿವಾದಿಯ ಪರವಾಗಿಃ</u>**

ನನ್ನ ಅಣ್ಣ ರಾಜಪ್ಪ ಅವರ ಹಿಸ್ಸೆಯನ್ನು ಮಾರಾಟ ಮಾಡಿರುತ್ತಾರೆಂದರೆ ಗೊತ್ತಿಲ್ಲ. ರಾಜಪ್ಪ *30* ಗುಂಟೆ ಜಮೀನನ್ನು *20*ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ. ಸಾಕ್ಷಿ ಮುಂದುವರಿದು ಅವರು ಸರ್ವೆ ನಂಃ *10/2* ಮಾರಾಟ ಮಾಡಿದ್ದಾರೆಂದು ಹೇಳುತ್ತಾರೆ. ಆ ರೀತಿ *1976* ರಿಂದ ಖರೀದಿ ಮಾಡಿದ ಬಸಪ್ಪರವರೇ ಸ್ವಾದೀನತೆಯಲ್ಲಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ನಾವು ಸ್ವಾದೀನತೆಯಲ್ಲಿದ್ದೇವೆಂದು ಹೇಳುತ್ತಾರೆ. ಕ್ರಯದಾರರೇ ಸ್ವಾದೀನತೆಯಲ್ಲಿದ್ದು ರಾಗಿ ಹಾಕಿದ್ದಾರೆಂದರೆ ಸಾಕ್ಷಿದಾರರು ಅವರು ರಾಗಿ ಹಾಕಿದ್ದಾರೆ, ನಾವು ರಾಗಿ ಹಾಕಿದ್ದೇವೆ ಎಂದು ಹೇಳುತ್ತಾರೆ. ಎ ಸಿ ನ್ಯಾಯಾಲಯದಲ್ಲಿ ಬಸಪ್ಪನವರು ಆರ್ ಎ ನಂಃ *148/2014* ರಂತೆ ಮೇಲ್ಮನವಿ

ಸಲ್ಲಿಸಿದ್ದಾರೆಂದರೆ ಸರಿ. ಅದು ಈಗಲೂ ಬಾಕಿ ಇರುತ್ತದೆ ಎಂದರೆ ಗೊತ್ತಿಲ್ಲ. ನಾನು ವಕೀಲರ ಮೂಲಕ ಅದಕ್ಕೆ ಹಾಜರಾಗಿದ್ದೇನೆಂದರೆ ಸರಿಯಲ್ಲ.

*1976* ರಲ್ಲಿ *30* ಗುಂಟೆ ಜಮೀನು ಮಾರಾಟ ಮಾಡಿದ ವಿಷಯ ಗೊತ್ತಿತ್ತು ಎಂದರೆ ಸರಿಯಲ್ಲ. ಅನಂತರ ನಾನು ಮತ್ತು ನನ್ನ ಸಹೋದರರು *20*ನೇ ಪ್ರತಿವಾದಿಗೆ ಮೋಸ ಮಾಡುವ ದುರುದ್ದೇಶದಿಂದ ರಾಜಪ್ಪ, ಓಂಕಾರಪ್ಪನವರು ನನಗೆ ಒಪ್ಪಿಗೆ ಪತ್ರ ಕೊಟ್ಟಿದ್ದಾರೆಂದರೆ ಸರಿಯಲ್ಲ. ನಂತರ ನನ್ನ ಹೆಸರಿಗೆ ಖಾತೆ ಬಂದಿರುತ್ತದೆ ಎಂದರೆ ಸರಿ ಮತ್ತು ಅದನ್ನು ಪ್ರಶ್ನೆ ಮಾಡಿ ಬಸಪ್ಪನವರು ಎ ಸಿ ನ್ಯಾಯಾಲಯದಲ್ಲಿ ಮತ್ತೊಂದು ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸರ್ವೆ ನಂಃ *10/2* ಸರ್ವೆ ನಂಃ *10/1* ರಲ್ಲಿ ಸೇರ್ಪಡೆಯಾಗಿದೆ ಎಂದರೆ ಸರಿಯಲ್ಲ. ಆ ರೀತಿ ಸೇರ್ಪಡೆಯಾಗಿದ್ದ ವಿಚಾರ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕಾನೂನುಬದ್ದವಾಗಿ *20*ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ *30* ಗುಂಟೆ ಜಮೀನು ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾವು ಯಾರೂ ಕೂಡಾ ಸದರಿ ಕ್ರಯಪತ್ರಕ್ಕೆ ಸಹಿ ಮಾಡಿಲ್ಲ ಎನ್ನುತ್ತಾರೆ. ಸದರಿ *30* ಗುಂಟೆ ಜಮೀನು ನನ್ನ ಅಣ್ಣ ರಾಜಪ್ಪನವರ ವಿಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. *20*ನೇ ಪ್ರತಿವಾದಿಯ ಆಸ್ತಿಯನ್ನು ಲಪಟಾಯಿಸುವ ದುರುದ್ದೇಶದಿಂದ ನಾನು ಮತ್ತು ನನ್ನ ಸಹೋದರರು ಸುಳ್ಳು ದಾವೆ ಸಲ್ಲಿಸಿದ್ದೇವೆಂದರೆ ಸರಿಯಲ್ಲ. *33* ವರ್ಷಗಳ ನಂತರ ಸುಳ್ಳು ದಾವೆ ಮಾಡಲಾಗಿದೆ ಎಂದರೆ ಸರಿಯಲ್ಲ.

*(ಉಳಿದಂತೆ ಪ್ರತಿವಾದಿ 11, 18 19 ರವರ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ)*

**ಮರುವಿಚಾರಣೆ ಇಲ್ಲಃ**

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)***

***ಓ ಹೇ ಕೇ ಸ ಇ ಎ ಒ***

ಸಹಿ/-

**(ಎಂ.ಸಿ. ನಂಜೇಗೌಡ)**
***ಹಿರಿಯ ಸಿವಿಲ್ ನ್ಯಾಯಾಧೀಶರು,***
***ತರೀಕೆರೆ.***